# ಹೇ ರಾಮ್...

ಕುವೆಂಪು ಅವರ ‘ಜಲಗಾರ’ ಭಕ್ತಿಯ ಡಾಂಭಿಕತೆ ಹಾಗೂ ಜಾತಿಪದ್ಧತಿಯನ್ನು ವಿಡಂಬಿಸಿರುವ ಬಹು ಸೊಗಸಾದ ನಾಟಕ. ನಾಟಕದ ಕೊನೆಯ ಭಾಗದಲ್ಲಿ, ಊರಿನ ಕಸವನ್ನು ತೊಳೆಯುವ ಜಲಗಾರನಿಗೆ (ಪೌರ ಕಾರ್ಮಿಕನಿಗೆ) ಶಿವ ಕಾಣಿಸಿಕೊಳ್ಳುತ್ತಾನೆ. ಜನಪ್ರಿಯ ವೇಷವನ್ನು ತೊರೆದು, ಜಲಗಾರನ ರೂಪದಲ್ಲಿಯೇ ಶಿವ ಪ್ರಕಟಗೊಂಡಿದ್ದಾನೆ. ತನ್ನಂತೆಯೇ ಇರುವ ಶಿವನನ್ನು ಕಂಡು ಜಲಗಾರನಿಗೆ ಅಚ್ಚರಿ. ‘ನೀನಾರು ಆಕೃತಿಯೆ, ನೀನಾರು? ಯಾರು?’ ಎಂದು ಪ್ರಶ್ನಿಸುತ್ತಾನೆ. ‘ನಾ ನಿನ್ನ ಬಂಧು’ ಎಂದು ಶಿವ ಹೇಳಿದರೂ ಜಲಗಾರ ನಂಬ. ‘ನೀನೆನ್ನ ಬಂಧು? ನಾನರಿಯದಿಹ ಬಂಧು!’ ಎಂದು ಉದ್ಗರಿಸುತ್ತಾನೆ. ‘ನಾ ನಿನ್ನ ಜಾತಿ’ ಎಂದರೂ ಅವನಿಗೆ ನಂಬಿಕೆಯಾಗದು. ಆಗ ಶಿವ ಹೇಳುತ್ತಾನೆ:

ಊರ ಜಲಗಾರ ನೀನು!
ಅಂಜದಿರು, ಸೋದರನೆ! ಜಗದ ಜಲಗಾರ
ನಾನು! ಶಿವನೆಂದು ಕರೆಯುವರು ಎನ್ನ!.......
ರುದ್ರನೆಂಬರು ಎನ್ನ; ಶಿವನೆಂಬರೆನ್ನ;
ಹೇಸುವರ, ಅಂಜುವರು, ಜಲಗಾರನೆನಲು!

ಶಿವನ ಮಾತು ಜಲಗಾರನಿಗೆ ನಿಜವೆನ್ನಿಸುತ್ತಿಲ್ಲ. ‘ನಿನ್ನ ನಾ ಶಿವನೆಂದು ನಂಬುವುದದೆಂತು?’ ಎಂದು ಪ್ರಶ್ನಿಸುತ್ತಾನೆ. ಈಗ ಎದುರಿಗೆ ನಿಂತಿರುವ ರೂಪವನ್ನು ಅವನು ಕಂಡರಿಯ, ಕೇಳರಿಯ. ಅವನ ಮನಸ್ಸಿನಲ್ಲಿ ಅಚ್ಚಾಗಿರುವುದು, ತಿಳಿದವರು ಹಾಗೂ ಪಂಡಿತರು ಬಣ್ಣಿಸಿರುವ ಶಿವ.

ರಜತಗಿರಿಗೊಡೆಯನಾಗಿಹೆಯಂತೆ; ಕೈಲಾಸ
ಪತಿಯಂತೆ; ಮಕುಟದಲಿ ಹಿಮಕರನ ತೊಟ್ಟಿರುವ
ಶಶಿಧರನು ನೀನಂತೆ, ಜಡೆಯೊಡವೆ ಗಂಗೆಯಾ–
ಗಿಹಳಂತೆ. ಕೊರಳಿನಲಿ ಹಾವುಗಳ ಕಟ್ಟಂತೆ.
ಹಣೆಯಲ್ಲಿ ಉರಿಗಣ್ಣನುಳ್ಳ ನೀಂ ಮುಕ್ಕಣ್ಣ–
ನಂತೆ! ಗಿರಜಾರಮಣನಂತೆ! ವಿಷಕಂಠ
ನೀನಂತೆ! ನೀಂ ಕುಬೇರನ ಮಿತ್ರನಂತೆ!
ಇಂತಿಹನು ಜಗದ ಜಲಗಾರನಹನೆಂತು?
ಇಂತಿಹನೆನ್ನ ಬಾಂಧವನೆ? ಸೋದರನೆ?

ಜಲಗಾರನ ಮಾತುಗಳನ್ನು ಕೇಳಿ ಶಿವನ ಮೊಗದಲ್ಲಿ ಮುಗುಳುನಗು. ತನ್ನ ವೇಷದ ಅಸಲಿಯತ್ತನ್ನು ಹೇಳದೆ ಅವನಿಗೀಗ ವಿಧಿಯಿಲ್ಲ.

ಸೋದರನೆ, ಶಿವನು ಶಾಸ್ತ್ರಗಳ ಶಿವನಲ್ಲ!
ಕಾವ್ಯಗಳ ಶಿವನಲ್ಲ! ಕವಿತೆಯಾ ಶಿವನಲ್ಲ!
ಬೆಳ್ಳಿಬೆಟ್ಟದ ಮೇಲೆ ಗಿರಿಜೆಯೊಡಗೂಡಿ
ಸರಸವಾಡುವ ರಸಿಕ ಶಿವನಲ್ಲ! ಬ್ರಹ್ಮಾಂಡ
ಒತ್ತುತಿಹ ಕಸದ ರಾಶಿಯ ಮೇಲೆ ಹತ್ತಿ,
ನಿಂತು, ನರ್ತನವೆಸಗುತಿಹ ತೋಟಿ ನಾನು!
ನಿಜಶಿವನು ಜಲಗಾರ! ನಿನ್ನ ಮುಂದಿಹನು, ನೋಡು!

‘ಹೇ ದೇವ, ಪಂಡಿತರದೇಕಂತು ಬಣ್ಣಿಪರು?’ ಎನ್ನುವ ಜಲಗಾರನ ಪ್ರಶ್ನೆಗೂ ಶಿವನಲ್ಲಿ ಉತ್ತರವಿದೆ:

ಸೋದರನೆ, ಶಾಸ್ತ್ರಗಳ ಕಂಗಳಿಗೆ ನಾನು
ನೋಡಲು ಕುರೂಪಿಯಾಗಿದ್ದೆ. ಅದರಿಂದ
ಚೆಲ್ವಾಂತ ತಣ್ಗದಿರನೊಡವೆ ಮಾಡಿದರೆನಗೆ!
ಅವರ ಭಾಗಕೆ ನಾನು ಪಾಪಿಯಾಗಿದ್ದೆ,
ಅದರಿಂದ ಗಂಗೆಯನು ತೊಡಿಸಿದರು ತಲೆಯಲ್ಲಿ,
ತೊಳೆದೆನ್ನ ಶುದ್ಧಮಾಡಲು ಎಂದು! ಅಸ್ಪೃಶ್ಯನ್
ಆಗಿದ್ದೆ! ಅದರಿಂದ ಹಣೆಗಣ್ಣ ಮುಡಿಸಿದರು,
ಸುಟ್ಟೆನ್ನ ಶುಚಿಮಾಡಲೆಂದು! ರೌದ್ರತೆಯನ್
ಈಯಲೆಂದೆನಗೆ ಉರಗಗಳ ಸುತ್ತಿದರು
ಕೊರಳಲ್ಲಿ, ಜೋಯಿಸರ ಭಾಗಕ್ಕೆ ಶಿವನು
ಮುಟ್ಟದವನಾಗಿಹನು, ಚಂದ್ರನಿಲ್ಲದೆ, ಗಂಗೆ
ಇಲ್ಲದೆಯೆ, ಹಣೆಗಣ್ಣು ಹಾವುಗಳು ಇಲ್ಲದೆಯೆ,
ಜನಿವಾರ ಬೂದಿಗಳು ಇಲ್ಲದೆಯೆ, ಶಿವಗುಡಿಗೆ
ಸೇರಿಸರು ಶಿವನಾದ ಎನ್ನ. ಅದರಿಂದ
ನಿಜವಾದ ಶಿವನು, ಜಲಗಾರ ಶಿವನು,
ಶಿವಗುಡಿಯ ಪೀಠದಲಿ ಎಂದೆಂದಿಗೂ ಇಲ್ಲ!

ಗುಡಿಯಲ್ಲಿ ಇಲ್ಲವೆಂದಮೇಲೆ ಶಿವ ಮತ್ತೆಲ್ಲಿರುವನು? ಶಿವ ಉತ್ತರಿಸುವನು:

ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ!
ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ!
ಎಲ್ಲಿ ಹೊಲೆಯನು ನನ್ನ ಕಾರ್ಯದಲಿ
ತೊಡಗಿಹನೊ
ಅಲ್ಲಿ ನಾನವನ ಪಕ್ಕದೊಳಿರುವೆ. ಕುಂಟರನು,
ಕುರುಡರನು, ದೀನರನು, ಅನಾಥರನು ಕೈಹಿಡಿದು
ಪೊರೆಯುತಿಹನೆಡೆಯಿರುವೆ. ಆ ನನ್ನ ಭಕ್ತರಿಗೆ
ನನ್ನ ನಿಜರೂಪದಿಂ ಮೈದೋರಿ ಸಲಹುವೆನು.
ನೀನೆನ್ನ ನಿಜಭಕ್ತನಾಗಿರುವೆ. ಅದಕಾಗಿ
ಕಲ್ಪನೆಯ ರೂಪವನು ತೆಗೆದೊಗೆದು ಬಂದಿಹೆನು.

ಜಲಗಾರನ ನಂಬಿಸಲಿಕ್ಕಾಗಿ, ‘ನೋಡಲ್ಲಿ! ಚಂದ್ರನಂ ಬಿಸುಟಿಹೆನು ಗಗನಕ್ಕೆ! ಗಂಗೆಯನ್ನೆಸೆದಿಹೆನು ಹಿಮಗಿರಿಗೆ! ಹಾವುಗಳ ಪಾತಾಳಕಟ್ಟಿಹೆನು!’ ತನ್ನ ಒಂದೊಂದೇ ಲಾಂಛನಗಳ ತ್ಯಜಿಸುತ್ತಾನೆ. ಹಣೆಗಣ್ಣು, ಮೈಬೂದಿ, ಯಜ್ಞೋಪವೀತ – ಎಲ್ಲವನ್ನೂ ಶಿವ ತ್ಯಜಿಸುತ್ತಾನೆ. ಆಗ, ‘ಪೊರಕೆಯಿಂದದ ಶೂಲ ಗುಡಿಸುತಿದೆ ಬ್ರಹ್ಮಗಳ/ ಬೀದಿಯನು!’. ‘ಶಾಸ್ತ್ರಗಳು ಶಿವಗಿತ್ತ ದಾನಗಳು ತೊಲಗೆ, ಉಳಿಯುವನು ಜಗದ ಜಲಗಾರ!’ ಎನ್ನುವ ಶಿವ – ‘ಊರ ತೋಟಿಯು ನೀನು; ಜಗದ ತೋಟಿಯು ನಾನು!’ ಎನ್ನುತ್ತ ಮುಟ್ಟುವ ಸ್ಥಿತಿ:

ನೀನೆ ನಾನಾಗಿಹೆನು! ನಾನೆ ನೀನಾಗಿರುವೆ!
ಶಿವ ನೀನು! ಶಿವ ನೀನು!

ಶಿವನ ಮಾತುಗಳನ್ನು ಕೇಳಿ ಜಲಗಾರ ಭಾವೋದ್ವೇಗದಿಂದ, ‘ಶಿವ ನಾನು! ಶಿವ ನಾನು!’ ಎಂದು ಉದ್ಗರಿಸುತ್ತಾನೆ. ಕೃತಕ ಪ್ರಭಾವಳಿಯಿಂದ ದೈವವನ್ನು ಪಾರು ಮಾಡಿ, ಭಕ್ತ ಮತ್ತು ಶಿವ ಅಭಿನ್ನ ಎನ್ನುವ ಕಾಣ್ಕೆಯೊಂದಿಗೆ ‘ಜಲಗಾರ’ ಕೊನೆಗೊಳ್ಳುತ್ತದೆ. ದೇವನೊಬ್ಬ ಭಕ್ತನನ್ನು ಉದ್ಧರಿಸಬೇಕಾದುದು ಹೀಗಲ್ಲವೆ?

ಶಿವನಿಂದ ರಾಮನ ಬಳಿಗೆ ಬರೋಣ. ಈ ರಾಮ ನಮ್ಮೊಳಗೆ ತುಂಬಿಕೊಂಡಿರುವ ಪರಿ ಯಾವುದು?

ರಾಮ ಪ್ರೇಮದ ಮೂರ್ತಿ. ಪ್ರಜಾವತ್ಸಲ. ತನ್ನ ಸಾಮ್ರಾಜ್ಯದ ಕಟ್ಟಕಡೆಯ ವ್ಯಕ್ತಿಯ ಮಾತಿಗೂ ಬೆಲೆ ಕೊಡುವ ಪ್ರಜಾಪ್ರಭುತ್ವವಾದಿ. ಪ್ರಜೆಯ ಮನದ ಮಾತಿಗೆ ಅಂಜಿ ಅಳುಕುವ ಆಡಳಿತಗಾರ. ಶಬರಿ ಕಚ್ಚಿದ ಹಣ್ಣುಗಳನ್ನು ಪ್ರೇಮದಿಂದ ಸ್ವೀಕರಿಸಿದವನು. ವಾನರರನ್ನೂ ಆದರಿಸಿದವನು, ಜೊತೆಗಿರಿಸಿಕೊಂಡವನು, ಅಳಿಲಿನ ಮಹತಿಯನ್ನು ಗುರುತಿಸಿದವನು. ಒಡಹುಟ್ಟುಗಳನ್ನು ಪ್ರೀತಿಸಿದವನು, ತಂದೆಯ ಮಾತಿಗೆ ಬದ್ಧನಾಗಿ ರಾಜ್ಯದ ಮಮಕಾರವನ್ನು ಮೀರಿದವನು. ಇಂಥ ರಾಮ ಇನ್ನೊಬ್ಬನುಂಟೆ? ಈ ಪ್ರಶ್ನೆಯನ್ನು ವರ್ತಮಾನದ ಹಿನ್ನೆಲೆಯಲ್ಲಿ ಕೇಳಿಕೊಂಡರೆ ದೊರೆಯುವ ಉತ್ತರ ಏನಾಗಿರಬಹುದು?

■ **ಚಂಪಕಮಾಲಾ**

## ಮಾತೇ ಮುತ್ತು

- ಕುರಿಯಂತೆ ನಡೆಯುವವರು ಬಹಳಷ್ಟು ಜನರು, ಗುರಿಯಿಟ್ಟು ನಡೆಯುವವರು ತುಂಬಾ ಕಡಿಮೆ.

  —ದ.ರಾ. ಬೇಂದ್ರೆ

- ಅವರು ಮೊದಲು ನಿಮ್ಮನ್ನು ನಿರ್ಲಕ್ಷಿಸುತ್ತಾರೆ, ನಂತರ ನಿಮ್ಮನ್ನು ನೋಡಿ ನಗುತ್ತಾರೆ, ಬಳಿಕ ನಿಮ್ಮೊಂದಿಗೆ ಸಂಘರ್ಷಕ್ಕಿಳಿಯುತ್ತಾರೆ, ಆಗ ನೀವು ಗೆದ್ದಂತೆ.

  —ಮಹಾತ್ಮ ಗಾಂಧಿ

- ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ.

  —ಕುವೆಂಪು

- ಬೇರೆಯವರ ಬುದ್ಧಿವಾದಕ್ಕೆ ಕಿವಿಗೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿನ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.

  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ನಮ್ಮ ಸ್ವಭಾವ, ಸಂದರ್ಭ— ಇವೆರಡನ್ನೂ ನಾವು ಕಂಡುಕೊಂಡು ನಮಗೆ ತಕ್ಕ ಗುರಿ ಯಾವುದು, ತಕ್ಕ ದಾರಿ ಯಾವುದು ಎಂಬುದನ್ನು ನಾವೇ ಗೊತ್ತು ಮಾಡಿಕೊಳ್ಳಬೇಕು.

  —ಡಿ ವಿ ಗುಂಡಪ್ಪ

- ನೀವು ಜೀವನವನ್ನು ಪ್ರೀತಿಸುತ್ತೀರಿ ಎಂದಾದರೆ, ಸಮಯ ಹಾಳು ಮಾಡಬೇಡಿ. ಏಕೆಂದರೆ ಸಮಯವೇ ಜೀವನ.

  —ಬ್ರೂಸ್ ಲೀ